**ದಿನಾಂಕ 09-09-2024 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇಲ್ಲಿ ಜರುಗಿದ ವಿಶ್ವವಿದ್ಯಾಲಯದ 115ನೇ ವ್ಯವಸ್ಥಾಪಕ ಮಂಡಳಿ ಸಭೆಯ ನಡಾವಳಿಗಳು**

**ಹಾಜರಿದ್ದ ಸದಸ್ಯರು**

**(ಅ) ಪದನಿಮಿತ್ತ ಸದಸ್ಯರು**

| | | |
|---|---|---|
| 01 | ಮಾನ್ಯ ಕುಲಪತಿಗಳು<br>ಕಪಪಮೀವಿವಿ, ಬೀದರ | ಅಧ್ಯಕ್ಷರು |
| 02 | ಹೆಚ್ಚುವರಿ ಕಾರ್ಯದರ್ಶಿ<br>ಕಾನೂನು ಇಲಾಖೆ,<br>ಬೆಂಗಳೂರು | ಸದಸ್ಯರು |
| 03 | ನಿರ್ದೇಶಕರು<br>ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ<br>ಬೆಂಗಳೂರು | ಸದಸ್ಯರು |
| 04 | ನಿರ್ದೇಶಕರು<br>ಮೀನುಗಾರಿಕೆ ಇಲಾಖೆ<br>ಬೆಂಗಳೂರು | ಸದಸ್ಯರು |
| 05 | ಕುಲಸಚಿವರು<br>ಕಪಪಮೀವಿವಿ, ಬೀದರ | ಸದಸ್ಯ ಕಾರ್ಯದರ್ಶಿ |

**(ಆ) ಇತರೆ ಸದಸ್ಯರು**

| | | |
|---|---|---|
| 06 | ಶ್ರೀ.ವಸಂತ ಬಿರಾದಾರ<br>ಪಶುಸಂಗೋಪನೆ ಅಥವಾ<br>ಮೀನುಗಾರಿಕೆ ಕ್ಷೇತ್ರದ<br>ಕೈಗಾರಿಕೆಗಳ ಪ್ರತಿನಿಧಿ<br>ಬೀದರ | ಸದಸ್ಯರು |
| 07 | ಶ್ರೀಮತಿ ಲತಾ ಡಿ.ಹೆಚ್<br>ಮಹಿಳಾ ಸಾಮಾಜಿಕ ಕಾರ್ಯಕರ್ತರು<br>ಮೀರಸಾಬಿಹಳ್ಳಿ,<br>ಚಳ್ಳಿಕೇರೆ, ಚಿತ್ರದುರ್ಗ | ಸದಸ್ಯರು |
| 08 | ಡಾ.ವೆಂಕಟಚಲ.ವಿ.ಎಸ್<br>ಶಿಕ್ಷಣ ತಜ್ಞರು<br>ವಡ್ಡರಹಳ್ಳಿ, ದೊಡ್ಡಬಳ್ಳಾಪುರ | ಸದಸ್ಯರು |
| 09 | ಡಾ.ಹೆಚ್.ಎಂ.ಜಯಪ್ರಕಾಶ<br>ವಿಜ್ಞಾನಿ<br>ಹೆದ್ದೂರು, ತಿರ್ಥಹಳ್ಳಿ<br>ಶಿವಮೊಗ್ಗ | ಸದಸ್ಯರು |
| 10 | ಶ್ರೀ ಸಂಗಪ್ಪ ವಾಲಿಕಾರ<br>ಜಾನುವಾರು ಸಾಕಾಣಿಕೆದಾರ<br>ಕವಡಿಮಟ್ಟಿ, ಮುದ್ದೇಬಿಹಾಳ<br>ವಿಜಯಪುರ | ಸದಸ್ಯರು |
| 11 | ಶ್ರೀ.ಬಸವರಾಜ.ಪಿ.ಭತಮುರ್ಗೆ<br>ಪ್ರಗತಿಪರ ಮೀನುಗಾರ<br>ಚನ್ನಬಸವನಗರ,<br>ಬೀದರ | ಸದಸ್ಯರು |

**ಗೈರು ಹಾಜರಾದ ಸದಸ್ಯರು**

| | | |
|---|---|---|
| 12 | ಸರ್ಕಾರದ ಕಾರ್ಯದರ್ಶಿ<br>ಪಶುಸಂಗೋಪನೆ ಮತ್ತು ಮೀನುಗಾರಿಕೆ<br>ಇಲಾಖೆ, ಬೆಂಗಳೂರು | ಸದಸ್ಯರು |
| 13 | ಸರ್ಕಾರದ ಕಾರ್ಯದರ್ಶಿಗಳು<br>ಹಣಕಾಸು ಇಲಾಖೆ<br>ಬೆಂಗಳೂರು | ಸದಸ್ಯರು |
| 14 | ಡಾ. ಶ್ರೀಶಾ ಉಪಾದ್ಯಾಯ<br>ಡೀನ್ (ಪವೈ)<br>ನಾಗಪುರ | ಸದಸ್ಯರು |

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ 115ನೇ ವ್ಯವಸ್ಥಾಪಕ ಮಂಡಳಿ ಸಭೆಗೆ ಆಗಮಿಸಿದ ಎಲ್ಲಾ ಗೌರವಾನ್ವಿತ ಸದಸ್ಯರನ್ನು ಮಾನ್ಯ ಕುಲಪತಿಗಳು ಸ್ವಾಗತಿಸುತ್ತಾ ಹೊಸದಾಗಿ ವಿಶ್ವವಿದ್ಯಾಲಯದ ಕುಲಸಚಿವರಾಗಿ ಪ್ರಭಾರ ವಹಿಸಿಕೊಂಡ ಡಾ.ಪಿ.ಟಿ.ರಮೇಶ್ ಇವರನ್ನು ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರುಗಳಿಗೆ ಪರಿಚಿಯಿಸುತ್ತಾ ವ್ಯವಸ್ಥಾಪಕ ಮಂಡಳಿ ಸಭೆಯ ಸೂಚಿಗಳನ್ನು ಚರ್ಚಿಸಲು ಸೂಚಿಸಿದರು. ಮುಂದುವರೆದು ಹೊಸದಾಗಿ ಪ್ರಭಾರ ವಹಿಸಿಕೊಂಡು ಕುಲಸಚಿವರಾದ ಡಾ.ಪಿ.ಟಿ.ರಮೇಶ್ ಇವರು ಸ್ವಪರಿಚಯ ಮಾಡಿಕೊಳ್ಳುತ್ತಾ ಎಲ್ಲಾ ವ್ಯವಸ್ಥಾಪಕ ಮಂಡಳಿ ಸದಸ್ಯರನ್ನು ಸಭೆಗೆ ಸ್ವಾಗತಿಸಿ ವಿಷಯ ಸೂಚಿಗಳನ್ನು ಚರ್ಚಿಸಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

**ವಿಷಯ ಸೂಚಿ: 01: ದಿನಾಂಕ 21-6-2024 ರಂದು ಕಪಪಮೀವಿವಿ, ಬೀದರನ ವ್ಯವಸ್ಥಾಪಕ ಮಂಡಳಿ ಕೊಠಡಿಯಲ್ಲಿ ಜರುಗಿದ ವಿಶ್ವವಿದ್ಯಾಲಯದ 114ನೇ ವ್ಯವಸ್ಥಾಪಕ ಮಂಡಳಿ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮ ಕುರಿತು**

**ನಿರ್ಣಯ**

ವ್ಯವಸ್ಥಾಪಕ ಮಂಡಳಿಯು ದಿನಾಂಕ 21-6-2024 ರಂದು ಜರುಗಿದ ವಿಶ್ವವಿದ್ಯಾಲಯದ 114ನೇ ವ್ಯವಸ್ಥಾಪಕ ಮಂಡಳಿ ಸಭೆಯ ನಡವಳಿಗಳ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಪರಿಶೀಲಿಸಿ ಈ ಕೆಳಕಂಡ ವಿಷಯಸೂಚಿಗೆ ಕ್ರಮ ಕೈಗೊಳ್ಳುವ ಬಗ್ಗೆ ಸೂಚಿಸಿ ಧೃಡೀಕರಿಸಲಾಯಿತು.

ಕ್ರಮ:ಕುಸ

**Item No.28** Regularization of twelve contract (12) employees working at constituent Institutes of the Karnataka Veterinary, Animal & Fisheries Sciences University in compliance to the orders of Hon'ble Supreme Court in Civil appeal on 5586 of 2024 (arising out of SLP (C) No.10123 of 2023) dated 30-04-2024 subject to outcome of the review peptition RP (C) No. 24936 of 2024 filed by the University.

**Resolution**

Sri.Vasanth Biradar, Hon'ble Board Member expressed his concern why the order has not been issued even after a lapse of two & half month. The Vice chancellor informed that the as per extant procedure the University conducted verifications. Further, the certificates were sent to the concerned institutions for verification. As on date University received verification for few candidates. Therefore, the Univeresity did not issue order. All the Hon'ble Board member directed the University to issue the order of regularization of the candidates.

ಕ್ರಮ:ಕುಸ

**ವಿಷಯ ಸೂಚಿ: 02 : ದಿನಾಂಕ 03-07-2024 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ-ಬೆಂಗಳೂರು ಇಲ್ಲಿ ಜರುಗಿದ ವಿಶೇಷ ವ್ಯವಸ್ಥಾಪಕ ಮಂಡಳಿ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮ**

**ನಿರ್ಣಯ**

ವ್ಯವಸ್ಥಾಪಕ ಮಂಡಳಿಯು ದಿನಾಂಕ 03-07-2024 ರಂದು ಜರುಗಿದ ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ-ಬೆಂಗಳೂರು ಇಲ್ಲಿ ಜರುಗಿದ ವಿಶೇಷ ವ್ಯವಸ್ಥಾಪಕ ಮಂಡಳಿ ಸಭೆಯ ನಡವಳಿಗಳ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಪರಿಶೀಲಿಸಿ ಧೃಡೀಕರಿಸಲಾಯಿತು

ಕ್ರಮ:ಕುಸ

**ವಿಷಯ ಸೂಚಿ: 03 : 7ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿ ಮತ್ತು ಸಂಬಂಧಿಸಿದ ಆದೇಶಗಳನ್ನು ಕಪಪಮೀವಿವಿ, ಬೀದರನ ಬೋಧಕೇತರ ಸಿಬ್ಬಂದಿಗಳಿಗೆ ವಿಸ್ತರಿಸಿ ಅಳವಡಿಸಿಕೊಳ್ಳುವ ಕುರಿತು**

**ನಿರ್ಣಯ**

ಕರ್ನಾಟಕ ಘನ ಸರ್ಕಾರವು ರಾಜ್ಯ ಸರ್ಕಾರಿ ನೌಕರರು ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಶ್ರೇಣಿ ಮತ್ತು ಸಂಬಂಧಿಸಿದ ಭತ್ಯೆಗಳನ್ನು ಪರಿಷ್ಕರಿಸಲು ಸರ್ಕಾರವು ಆದೇಶ ಸಂಖ್ಯೆ: ಆಇ 21 ಎಸ್‌ಆರ್ ಪಿ 2024, ಬೆಂಗಳೂರು, ದಿನಾಂಕ 22-6-2024, ಅಧಿಸೂಚನೆ ಸಂಖ್ಯೆ: ಆಇ 21ಎಸ್‌ಆರ್‌ಪಿ 2024 ದಿನಾಂಕ 17-8-2024, ಆದೇಶ ಸಂಖ್ಯೆ: ಆಇ 21 ಎಸ್ ಆರ್‌ಪಿ 2024 ದಿನಾಂಕ 23-8-2024 ಹಾಗೂ ರಾಜ್ಯ ಸರ್ಕಾರಿ ನೌಕರ ನಿವೃತ್ತಿ ವೇತನ ಮತ್ತು ನಿವೃತ್ತಿ ಸೌಲಭ್ಯಗಳ ಪರಿಷ್ಕರಣೆ ಆದೇಶ ಸಂಖ್ಯೆ ಆಇ-ಪಿಇಎನ್/262/2024 ಬೆಂಗಳೂರು ದಿನಾಂಕ 28-8-2024 ಹೊರಡಿಸಿದ್ದು ಸದರಿ 7ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿ ಹಾಗೂ ಇತರೇ ಸೌಲಭ್ಯಗಳನ್ನು ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿನ ಬೋಧಕೇತರ ನೌಕರರಿಗೆ ವಿಸ್ತರಿಸಲು ವ್ಯವಸ್ಥಾಪಕ ಮಂಡಳಿಯು ಸುದಿರ್ಘ ಚರ್ಚೆಯ ನಂತರ ಅನುಮೋದನೆ ನೀಡಿತ್ತು. ಮುಂದುವರೆದು ಹೆಚ್ಚುವರಿ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 04 : ವಿಭಾಗ ಮುಖ್ಯಸ್ಥರ (HEAD OF DIVISIONS) ನೇಮಕ**

**ನಿರ್ಣಯ**

ಮಾನ್ಯ ವ್ಯವಸ್ತಾಪಕ ಮಂಡಳಿಯು ಸುದೀರ್ಘ ಚರ್ಚೆ ಮತ್ತು ವಿಶ್ವವಿದ್ಯಾಲಯದ ಅಧಿನಿಯಮ 2004 (4), 28(E) ಮತ್ತು ಪರಿನಿಯಮ 23 (2), (3) ಮತ್ತು (4) ರ ಪ್ರಕಾರ ಈ ಕೆಳಕಂಡ ಪ್ರಾಧ್ಯಾಪಕರುಗಳನ್ನು ಜೇಷ್ಠತೆಯ ಆಧಾರದ ಮೇಲೆ ವಿಭಾಗ ಮುಖ್ಯಸ್ಥರನ್ನಾಗಿ ನೇಮಿಸಲು ಅನುಮೋದನೆ ನೀಡಿತ್ತು.

| ಕ್ರಸಂ | ಪ್ರಾಧ್ಯಾಪಕರ ಹೆಸರು ಮತ್ತು ವಿವರ | ನೇಮಕಗೊಂಡ ವಿಭಾಗ |
|---|---|---|
| 01 | ಡಾ.ಬಿ.ಎನ್.ನಾಗರಾಜ<br>ಪ್ರಾಧ್ಯಾಪಕರು<br>ಪಶುವೈದ್ಯಕೀಯ ಶಸ್ತ್ರ ಚಿಕಿತ್ಸಾ ಮತ್ತು ಕ್ಷ ಕಿರಣಶಾಸ್ತ್ರ ವಿಭಾಗ<br>ಪಶುವೈದ್ಯಕೀಯ ಮಹಾವಿದ್ಯಾಲಯ<br>ಹೆಬ್ಬಾಳ-ಬೆಂಗಳೂರು | ವಿಭಾಗೀಯ ಮುಖ್ಯಸ್ಥರು<br>(Veterinary Clinical Science)<br>ಪಶುವೈದ್ಯಕೀಯ ಮಹಾವಿದ್ಯಾಲಯ<br>ಪಶುವೈದ್ಯಕೀಯ ಮಹಾವಿದ್ಯಾಲಯ<br>ಹೆಬ್ಬಾಳ-ಬೆಂಗಳೂರು |
| 02 | ಡಾ.ಎಂ.ನಾರಾಯಣಸ್ವಾಮಿ<br>ಪ್ರಾಧ್ಯಾಪಕರು<br>Dept.of Veterinary Physiology<br>ಪಶುವೈದ್ಯಕೀಯ ಮಹಾವಿದ್ಯಾಲಯ<br>ಹೆಬ್ಬಾಳ-ಬೆಂಗಳೂರು -24 | ವಿಭಾಗೀಯ ಮುಖ್ಯಸ್ಥರು<br>(Pre & Para Clinical Science)<br>ಪಶುವೈದ್ಯಕೀಯ ಮಹಾವಿದ್ಯಾಲಯ<br>ಹೆಬ್ಬಾಳ-ಬೆಂಗಳೂರು |
| 03 | ಡಾ.ಸಚಿಂದ್ರಬಾಬು<br>ಪ್ರಾಧ್ಯಾಪಕರು<br>Dept. of Dairy Business Management<br>ಹೈನು ವಿಜ್ಞಾನ ಮಹಾವಿದ್ಯಾಲಯ<br>ಹೆಬ್ಬಾಳ-ಬೆಂಗಳೂರು | ವಿಭಾಗೀಯ ಮುಖ್ಯಸ್ಥರು<br>(Dairy Science )<br>ಹೈನು ವಿಜ್ಞಾನ ಮಹಾವಿದ್ಯಾಲಯ,<br>ಹೆಬ್ಬಾಳ-ಬೆಂಗಳೂರು |

ಕ್ರಮ:ಕುಸ

**ವಿಷಯ ಸೂಚಿ: 05: ಪಶುವೈದ್ಯಕೀಯ ಮಹಾವಿದ್ಯಾಲಯ, ಕೊಯಿಲಾ ದಕ್ಷಿಣ ಕನ್ನಡ ಇಲ್ಲಿಗೆ ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು**

**ನಿರ್ಣಯ**

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಡಿಯಲ್ಲಿ ಬರುವ ಪಶುವೈದ್ಯಕೀಯ ಮಹಾವಿದ್ಯಾಲಯ, ಕೊಯಿಲಾ, ಪುತ್ತೂರು ಇಲ್ಲಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಸೇರಿದಂತೆ, 25 ಬೋಧಕ ಹುದ್ದೆಗಳನ್ನು ಷರತ್ತು ಮತ್ತು ನಿಬಂಧನೆಗಳನುಸಾರ ನೇರ ನೇಮಕಾತಿ ಮೂಲಕ ಹಾಗೂ ವಿವಿಧ ವೃಂದದ 32 ಭೋಧಕೇತರ ಹುದ್ದೆಗಳನ್ನು (Lab Non Teaching : 15 +Admin Non Teaching:17) ಮೊದಲನೇ ಹಂತದಲ್ಲಿ ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿರುವದರಿಂದ ವಿಶ್ವವಿದ್ಯಾಲಯವು ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮುಖೇನ ಭರ್ತಿ ಮಾಡಲು ಅನುಮತಿಗಾಗಿ ಮಾನ್ಯ ಘನವೆತ್ತ ರಾಜ್ಯಪಾಲರಿಗೆ ಸಲ್ಲಿಸಿರುವ ಕರಡು ಅಧಿಸೂಚನೆಗೆ ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ. ಮುಂದುವರೆದು ಸರ್ಕಾರಿ ಆದೇಶದಲ್ಲಿನ ಹೊರಗುತ್ತಿಗೆ ಮುಖೇನ ಸೇವೆ ಪಡೆಯಲು ಅನುಮತಿಸಿರುವ ಬೋಧಕೇತರ ಹುದ್ದೆಗಳನ್ನು ನಿಯಮಾವಳಿ ಪ್ರಕಾರ ಪಡೆಯಲು ಅನುಮತಿ ನೀಡಿ ನಿಯೋಜನೆ ಮೇಲೆ ಪಡೆಯುವ ಬೋಧಕೇತರ ಹುದ್ದೆಗಳನ್ನು ನೇರ ನೇಮಕಾತಿ ಮುಖೇನ ಭರ್ತಿ ಮಾಡಿಕೊಳ್ಳುವ ಸಂಬಂಧ ಮುಂಜೂರಾತಿ ನೀಡಲು ಸರ್ಕಾರಕ್ಕೆ ಪುನ ಪ್ರಸ್ತಾವನೆ ಸಲ್ಲಿಸಲು ವ್ಯವಸ್ಥಾಪಕ ಮಂಡಳಿಯು ತೀರ್ಮಾನಿಸಿತ್ತು.

ಶ್ರೀ. ಬಸವರಾಜ ಭತಮೂರ್ಗೆ, ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರು, ಪ್ರಸ್ತುತ ವಿಶ್ವವಿದ್ಯಾಲಯದಡಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಕೆಲಸಗಾರರಿಗೆ ನಿಗದಿಪಡಿಸಲಾದ ವೇತನ ಏಜೆನ್ಸಿದಾರರು ನೀಡದೆ ಇರುತ್ತಿರುವ ವಿಷಯ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಸಂಬಂಧ ಹೊರಗುತ್ತಿಗೆ ಎಜೆನ್ಸಿ ಬದಲಾಗಿ ಜಿಲ್ಲಾಧಿಕಾರಿಗಳ ಕಚೇರಿ, ಬೀದರ ಅಡಿಯಲ್ಲಿರುವ ಮಾನವ ಸಂಪನ್ಮೂಲ ಸಂಸ್ಥೆಯಿಂದ ಸೇವೆ ಪಡೆಯುವದರಿಂದ ಸರಿಯಾದ ಸಮಯಕ್ಕೆ ವೇತನ ಪಾವತಿಸಬಹುದು ಮತ್ತು ಅವರ EPF/ESI ಕೂಡ ನಿಗದಿತ ಸಮಯಕ್ಕೆ ಪಾವತಿಯಾಗುವುದು ಎಂದು ತಿಳಿಸಿದರು. ಡಾ.ಮಂಜುನಾಥ ಪಾಳೆಗಾರ, ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರು ಹೊರಗುತ್ತಿಗೆ ನೌಕರರ EPF/ESI ಮತ್ತು Service charges ಕಳೆದ ಮೇಲೆ ಎಷ್ಟು ಬರುವದಾಗಿ ಕೇಳಿದರು. ಈ ಕುರಿತು ಡಾ.ಹೆಚ್.ಎಂ. ಜಯಪ್ರಕಾಶ, ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರು ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ತಾವು ಸಂಬಂಧಪಟ್ಟ ದಾಖಲೆ ಮತ್ತು ಮಾಹಿತಿಯನ್ನು ಒದಗಿಸಿದ್ದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಬಹುದಾಗಿದೆ ಎಂದು ಮಾಹಿತಿಸಿದರು.

ಕ್ರಮ:ಕುಸ

**ವಿಷಯ ಸೂಚಿ: 06: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಬೆಂಗಳೂರು ಇಲ್ಲಿನ ಬ್ಯಾಕಲಾಗ್ ವಿಜ್ಞಾನಿ-1 ಹುದ್ದೆಯ ಸಂದರ್ಶನಕ್ಕೆ ವಿಷಯ ಪರಿಣಿತರನ್ನು ನೇಮಕ ಮಾಡಿರುವ ಕುರಿತು**

**ನಿರ್ಣಯ**

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು ಇಲ್ಲಿ ಖಾಲಿ ಇರುವ ಒಂದು ಬ್ಯಾಕಲಾಗ್ ವಿಜ್ಞಾನಿ-1 ಹುದ್ದೆಯನ್ನು ಭರ್ತಿ ಮಾಡಲು ವಿಶ್ವವಿದ್ಯಾಲಯವು ದಿನಾಂಕ 15-6-2024 ರಂದು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಸದರಿ ನೇಮಕಾತಿಯಲ್ಲಿ ಅರ್ಹರಾದ ಅಭ್ಯರ್ಥಿಗಳನ್ನು ಸಮಾಲೋಚನೆ (Counseling) ನಡೆಸಲು ವಿಷಯ ತಜ್ಞರ ಪಟ್ಟಿಯನ್ನು ಈಗಾಗಲೇ ವ್ಯವಸ್ಥಾಪಕ ಮಂಡಳಿ ಅನುಮೋದನೆ ನೀಡಿರುತ್ತದೆ. ಅದರಲ್ಲಿ ಡಾ.ವಿಜಯಕುಮಾರ್. ಜಿ. ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು (Dept.of Veterinary Medicine), Madras Veterinary College, Chennai ಇವರ ಹೆಸರು ವಿಷಯ ತಜ್ಞರ ಅನುಮೋದಿತ ಪಟ್ಟಿಯಲ್ಲಿ ಇರದೇ ಇರುವದರಿಂದ ವ್ಯವಸ್ಥಾಪಕ ಮಂಡಳಿ ಸಭೆಯ ಅನುಮೋದನೆಯ ಷರತ್ತುಗೊಳಪಟ್ಟು ಆಹ್ವಾನಿಸಿರುವದಕ್ಕೆ ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

ಕ್ರಮ:ಕುಸ

**ವಿಷಯ ಸೂಚಿ: 07: ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇಲ್ಲಿ BSNL Mobile Tower ಅಳವಡಿಸುವ ಕುರಿತು**

**ನಿರ್ಣಯ**

ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇಲ್ಲಿನ ಬೋಧನೆ, ಶೈಕ್ಷಣಿಕ ಮತ್ತು ವಿಸ್ತರಣೆಯ ಹಿತದೃಷ್ಟಿಯಿಂದ ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇಲ್ಲಿನ ಆವರಣದಲ್ಲಿ BSNL ವತಿಯಿಂದ ಉಚಿತವಾಗಿ Mobille Tower ಅಳವಡಿಸಲು ಅನುಮೋದನೆ ನೀಡಿರುತ್ತದೆ.

ಕ್ರಮ:ಕುಸ

**ವಿಷಯ ಸೂಚಿ: 08: ಅನುಚ್ಛೇದ 371 (ಜೆ) ರಡಿಯ ಕಲ್ಯಾಣಕರ್ನಾಟಕ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಾದ ಸರ್ಕಾರದಿಂದ ನೇಮಕಾತಿಗೆ ಅನುಮತಿ ನೀಡಿದ ಬೋಧಕೇತರ ಹುದ್ದೆಗಳ ನೇಮಕಾತಿ ಕುರಿತು**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಇಲ್ಲಿ ಅನುಚ್ಛೇಧ 371(ಜೆ) ರಡಿಯ ಕಲ್ಯಾಣ- ಕರ್ನಾಟಕದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಾದ ಹುದ್ದೆಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 71 ಪಅಸೇ 2021(ಭಾ-1) ದಿನಾಂಕ:16.03.2022 ರಂತೆ ಒಟ್ಟು 122 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿರುವದರಿಂದ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರವು ಅನುಮತಿ ನೀಡಿದ ನಂತರ ನೇಮಕಾತಿ ಪ್ರಕ್ರೀಯನ್ನು ಮುಂದುವರೆಸಲು ವ್ಯವಸ್ಥಾಪಕ ಮಂಡಳಿಯು ಅನುಮತಿ ನೀಡಿರುತ್ತದೆ. ಮುಂದುವರೆದು ಸದರಿ ಹುದ್ದೆಗಳ ಪೈಕಿ ಇರುವ ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

ಮುಂದುವರೆದು ವಿಶ್ವವಿದ್ಯಾಲಯದಡಿ ನೇರನೇಮಕಾತಿಗಾಗಿ ಅನುಮತಿ ನೀಡಿರುವ ಬೋಧಕೇತರ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡುವ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿ ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಚರ್ಚಿಸಲಾಗಿ ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ವ್ಯವಸ್ಥಾಪಕ ಮಂಡಳಿ ಸದಸ್ಯರ ನಿಯೋಗವೊಂದನ್ನು ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು ಇವರನ್ನು ಖುದ್ದಾಗಿ ಭೇಟಿ ನೀಡಿ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಅನುಮತಿ ನೀಡುವಂತೆ ಕೋರಲು ನಿರ್ಣಯಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 09: Assistant Comptroller, Assistant Registrar and Assistant Administrative Officer ಹುದ್ದೆಗಳನ್ನು ಶೇ.50% ರಷ್ಟು ನೇರ ನೇಮಕಾತಿ ಹಾಗೂ ಶೇ.50% ರಷ್ಟು ಮುಂಬಡ್ತಿಯಿಂದ ಭರ್ತಿ ಮಾಡಿಕೊಳ್ಳುವ ಬಗ್ಗೆ**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯದಂತೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಇಲ್ಲಿನ ವೃಂದ ಮತ್ತು ನೇಮಕಾತಿಯ ನಿಯಮಾವಳಿಯಲ್ಲಿನ Group "A" ವೃಂದದ Assistant Comptroller, Assistant Registrar and Assistant Administrative Officer ಹುದ್ದೆಗಳನ್ನು ಶೇ.50 ರಷ್ಟು ನೇರ ನೇಮಕಾತಿ ಹಾಗೂ ಶೇ.50 ರಷ್ಟು ಮುಂಬಡ್ತಿಯಿಂದ ಭರ್ತಿ ಮಾಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪಕ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ನೀಡಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 10: ವಿಶ್ವವಿದ್ಯಾಲಯ ಮತ್ತು ಅಂಗಸಂಸ್ಥೆಗಳಲ್ಲಿರುವ ಜಾಗ ಮತ್ತು ಕಟ್ಟಡಗಳ ಬಾಡಿಗೆ ದರಪಟ್ಟಿ ನಿಗದಿಪಡಿಸಿರುವ ಕುರಿತು**

**ನಿರ್ಣಯ**

ದಿನಾಂಕ 9-1-2023 ರಂದು ಜರುಗಿದ ವಿಶ್ವವಿದ್ಯಾಲಯದ 110ನೇ ವ್ಯವಸ್ಥಾಪಕ ಮಂಡಳಿ ಸಭೆಯ ನಿರ್ಣಯದಂತೆ ಹೆಬ್ಬಾಳ ಬೆಂಗಳೂರು ಆವರಣದಲ್ಲಿರುವ ಕಟ್ಟಡ ಮತ್ತು ನಿವೇಶನಗಳನ್ನು ಸರ್ಕಾರಿ ಮತ್ತು ಇತರೆ ಸಂಸ್ಥೆಗಳಿಗೆ ಲೀಜ್/ಬಾಡಿಗೆ ಆಧಾರದ ಮೇಲೆ ನೀಡಿರುವ ದರವನ್ನು ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ನಿಯಮಾವಳಿ ಪ್ರಕಾರ ಟೆಂಡರ್ ಕರೆದು ದರ ನಿಗದಿಪಡಿಸುವಂತೆ ನಿರ್ಣಯಿಸಿರುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಷ್ಕೃತ ಬಾಡಿಗೆ ಕಟ್ಟುವಂತೆ ಸೂಚಿಸಿರುವ ವಿಷಯವನ್ನು ವ್ಯವಸ್ಥಾಪಕ ಮಂಡಳಿ ಸಭೆಯ ಗಮನಕ್ಕೆ ತರಲಾಯಿತು. ಮುಂದುವರೆದು, ಉಪ ಪೋಲಿಸ್ ಆಯುಕ್ತರು, ಉತ್ತರ ವಿಭಾಗ, ಬೆಂಗಳೂರು, Director, ICAR ATARI, Bangalore, Cyfuture India Pvt.Ltd, Bangalore, Director, ICAR-Indian Institute of Horticultural Research, Bangalore, ಇವರುಗಳು ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿ ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಆದೇಶದಂತೆ ನಿಗದಿಪಡಿಸಿರುವ ಪರಿಷ್ಕೃತ ದರ/ಬಾಡಿಗೆಯನ್ನು ಕಡಿಮೆ ಮಾಡಲು/ಪುನರ್ ಪರಿಶೀಲಿಸುವಂತೆ ಕೋರಿರುವ ವಿಷಯವನ್ನು ವ್ಯವಸ್ಥಾಪಕ ಮಂಡಳಿಯಲ್ಲಿ ಚರ್ಚಿಸಲಾಯಿತು.

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದಿರ್ಘ ಚರ್ಚೆಯ ನಂತರ ಸದರಿ ಪ್ರಸ್ತಾವನೆ ಬಗ್ಗೆ ಪರಿಶೀಲಿಸಲು ಮತ್ತು ದರನಿಗದಿಪಡಿಸುವ ಸಂಬಂಧ ಡೀನ್ ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಯಿತು.

| | | |
|---|---|---|
| 1. | ಡೀನ್ (ಪವೈ), ಬೆಂಗಳೂರು | : ಆಧ್ಯಕ್ಷರು |
| 2. | ಡೀನ್ (ಹೈನು), ಬೆಂಗಳೂರು | : ಸದಸ್ಯರು |
| 3. | ನಿರ್ದೇಶಕರು, ಪಆಜೈಸಂ ಬೆಂಗಳೂರು | : ಸದಸ್ಯರು |
| 4. | ಆಸ್ತಿ ಅಧಿಕಾರಿಗಳು, ಕಪಪಮೀವಿವಿ, ಬೀದರ | : ಸದಸ್ಯರು |
| 5. | ಕಾರ್ಯನಿರ್ವಾಹಕ ಅಭಿಯಂತರರು, ಕಪಪಮೀವಿವಿವ, ಬೀದರ | : ಸದಸ್ಯರು |
| 6. | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಪ್ರಾಕ ಹೆಬ್ಬಾಳ-ಬೆಂಗಳೂರು | : ಸದಸ್ಯರು |

ಸದರಿ ಸಮಿತಿಯು ಸಲ್ಲಿಸುವ ವರದಿಯನ್ನುಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ:

**ವಿಷಯ ಸೂಚಿ: 11: Central detective Training Institute, Hyderabad ಇವರಿಗೆ ಹೆಬ್ಬಾಳ ಆವರಣದ Farmers Training Institute ನಲ್ಲಿ ಮೂರು ಕೊಣೆಗಳನ್ನು ಬಾಡಿಗೆ ಮೇಲೆ ನೀಡುವ ಕುರಿತು**

**ನಿರ್ಣಯ**

Sri.Rajshekar.N, IPS, DIG, Director, Central Detective Training Institute, Bureau of Police Research & Development, Hyderabad ಇವರು ಮಾನ್ಯ ಕುಲಪತಿಗಳು, ಕಪಪಮೀವಿವಿ, ಬೀದರ ಇವರಿಗೆ ಪತ್ರ ಬರೆದು ಹೆಬ್ಬಾಳ ಆವರಣದಲ್ಲಿ ಇರುವ Farmers Training Institute ನಲ್ಲಿ ಕಚೇರಿ ಉಪಯೋಗಕ್ಕಾಗಿ ಒಟ್ಟು ಮೂರು ಕೋಣೆಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲು ಕೋರಿರುವ ಪ್ರಸ್ತಾವನೆಗೆ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚಿಸಿ ಹೆಬ್ಬಾಳ-ಬೆಂಗಳೂರು ಆವರಣದ ಪ್ರಾದೇಶಿಕ ಕಚೇರಿ ಪಕ್ಕದಲಿರುವ ಸ್ಥಳ ಅಥವಾ Tender Processing Cell/Transport Unit ನ ಸಮೀಪವಿರುವ ಯಥಾಸ್ಥಿತಿಯಲ್ಲಿರುವ ಕಟ್ಟಡಗಳನ್ನು ಮಾಸಿಕ ದರದ ಆಧಾರದ ಮೇಲೆ ಬಾಡಿಗೆಗೆ ನೀಡಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ. ಈ ಸಂಬಂಧ ಕೊಡ ಮಾಡಲಾಗುವ ಕಟ್ಟಡವನ್ನು Renovation ಮತ್ತು ದುರಸ್ತಿ ಕೆಲಸವನ್ನು Central Detective Training Institute Hyderabd ಇವರೇ ನಿರ್ವಹಿಸಿಕೊಳ್ಳುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 12:** Constitution of Project Management Committee for ensuring quality of works in the University

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ Constitution of Project Management Committee for ensuring quality of works in the University ಬಗ್ಗೆ ನಿರ್ಣಯವನ್ನು ಮುಂದೂಡಲಾಯಿತು.

ಕ್ರಮ:ಕುಸ:

**ವಿಷಯ ಸೂಚಿ: 13:** Permission to take up the work of providing concrete Road from main gate to Veterinary Collee and from Main road to Administration Block at Bidar campus

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸದರಿ ಪ್ರಸ್ತಾವನೆ ಮೂಂದೂಡಿ (deferred) ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ ವಿಶ್ವವಿದ್ಯಾಲಯದಡಿ ಲಭ್ಯವಿರುವ ಅನುದಾನದ ವಿವರ ಮತ್ತು ಅತೀ ಅವಶ್ಯಕವಾಗಿ ಕೈಗೊಳ್ಳುವ ಕಾಮಗಾರಿಗಳ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 14:** Transfer of administrative control of Obscure Disease Research Centre to Dean Veterinary College, Shivamogga

**ನಿರ್ಣಯ**

ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದಲ್ಲಿರುವ ಜಾನುವಾರುಗಳ ನಿಗೂಢ ಕಾಯಿಲೆಗಳ ಸಂಶೋಧನಾ ಸಂಸ್ಥೆಯ ಪ್ರಧಾನ ಸಂಶೋಧಕರು ಸದರಿ ಸಂಸ್ಥೆಗೆ ರೂ. 10.00 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಆಯುಕ್ತರು, ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಿದ ಬಗ್ಗೆ ಮತ್ತು ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗದೇ ಇರುವದರಿಂದ ವಿಶ್ವವಿದ್ಯಾಲಯವು ಕೇಂದ್ರದ ಚಟುವಟಿಕೆಗಳ ಮುಂದುವರಿಕೆಗಾಗಿ ಪ್ರತಿ ವರ್ಷ ಅನುದಾನ ನೀಡುತ್ತಿದ್ದು ಸದರಿ ಯೋಜನೆಯು ಮಂಜೂರಾದಾಗಿನಿಂದ ಸಂಶೋಧನಾ ನಿರ್ದೇಶಕರು, ಕಪಪಮೀವಿವಿ, ಬೀದರ ಅಡಿಯಲ್ಲಿ ಕೆಲಸ ನಿರ್ವಹಿಸಿರುತ್ತದೆ. ಈ ಕೇಂದ್ರಕ್ಕೆ ಪ್ರತ್ಯೇಕ ಹುದ್ದೆಗಳು ಮಂಜೂರಾಗದೇ ಇರುವದರಿಂದ ಡಾ.ಎನ.ಬಿ.ಶ್ರೀಧರ, ಪ್ರಾಧ್ಯಾಪಕರು, ಹೆಚ್ಚುವರಿಯಾಗಿ ಸದರಿ ಕೇಂದ್ರದ ಕೆಲಸವನ್ನು ನಿರ್ವಹಿಸುತ್ತಿರುವದರಿಂದ ಸದರಿ ಕೇಂದ್ರವನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದ ಡೀನ್ ರವರ ಅಧೀನಕ್ಕೆ ವರ್ಗಾಯಿಸಲು ವ್ಯವಸ್ಥಾಪಕ ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ಅನುಮೋದನೆ ನೀಡಿರುತ್ತದೆ.

ಕ್ರಮ:ಕುಸ

**ವಿಷಯ ಸೂಚಿ: 15:** Pay Protection to Newly Recruited Teachers who joined KVAFSU after rendering service in ICAR institutes/State Agricultural Universitites/State Veterinary Universities

**ನಿರ್ಣಯ**

After detailed discussion and deliberation, the Board resolved to place an item in the next meeting of Board of Management with details of all the teachers, justification and regulations for such pay protection.

ಕ್ರಮ:ಕುಸ

**ವಿಷಯ ಸೂಚಿ: 16:** Amendment to the KVAFSU ACT 2004 and KVAFSU Statute 2009 State Agricultural Universitites/State Veterinary Universities

**ನಿರ್ಣಯ**

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಅಧಿನಿಯಮ 2004 ರಲ್ಲಿ ಮತ್ತು ಪರಿನಿಯಮ 2009 ರಂತೆ ಅಸ್ತಿತ್ವಕ್ಕೆ ಬಂದಿದ್ದು ಅದರಂತೆ ವಿಶ್ವವಿದ್ಯಾಲಯವು ಕಾರ್ಯನಿವರ್ಹಿಸುತ್ತಿದೆ. ವಿಶ್ವವಿದ್ಯಾಲಯದ ಅಧಿನಿಯಮ 2005 ಅಸ್ತಿತ್ವಕ್ಕೆ ಬಂದ ನಂತರ ಹೊಸದಾಗಿ ಮಹಾವಿದ್ಯಾಲಯಗಳು, ಪಶುಸಂಗೋಪನಾ ಪಾಲಿಟೆಕ್ನಿಕ್ಸ್ ಮತ್ತು ಇತರೆ ಸಂಶೋಧನಾ ಕೇಂದ್ರಗಳು ಸ್ಥಾಪನೆಗೊಂಡು ತನ್ನ ಕಾರ್ಯನಿರ್ವಹಿಸುತ್ತಿವೆ. ವಿಶ್ವವಿದ್ಯಾಲಯದ ಅಧಿನಿಯಮ 2005 ರಲ್ಲಿ ರಾಜ್ಯದ ಇತರೆ Farm Universities ಗಳಲ್ಲಿರುವ ಅಧಿಕಾರಿಗಳ ಹುದ್ದೆಗಳು ಅಂದರೆ ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರು, ಪರೀಕ್ಷಾ ನಿಯಂತ್ರಕರು, ಆಡಳಿತಾಧಿಕಾರಿ, ಆಸ್ತಿ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳ ಹುದ್ದೆಗಳನ್ನು ಇರದೇ ಇರುವದರಿಂದ ವಿಶ್ವವಿದ್ಯಾಲಯದ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಹಿನ್ನಡೆಯಾಗುತ್ತಿದೆ ಎಂದು ಮಾನ್ಯ ಕುಲಪತಿಗಳು ಸಭೆಯಲ್ಲಿ ಪ್ರಸ್ತಾಪಿಸಿ ವಿಶ್ವವಿದ್ಯಾಲಯದ ಅಧಿನಿಯಮ 2005 ರನ್ನು ತಿದ್ದುಪಡಿ ಮಾಡುವುದು ಅವಶ್ಯಕತೆ ಇರುತ್ತದೆ ಮತ್ತು ವಿಶ್ವವಿದ್ಯಾಲಯದ ಅಧಿನಿಯಮ 2004 ರ ತಿದ್ದುಪಡಿಗೆ ಅವಕಾಶ ಇರುತ್ತದೆ. ಈ ಸಂಬಂಧ ಅಧಿನಿಯಮ 2004, ಸೆಕ್ಷನ್ 28 (ಹೆಚ್) ರ ಪ್ರಕಾರ ತಿದ್ದುಪಡಿ ಮಾಡುವ ಸಂಬಂಧ Standing Committee ರಚಿಸುವ ಬಗ್ಗೆ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಈ ಕೆಳಕಂಡಂತೆ ಸಮಿತಿ ರಚಿಸಲು ಅನುಮೋದನೆ ನೀಡಿರುತ್ತದೆ.

| | |
|---|---|
| 1. Vice Chancellor,KVAFSU | Chairman |
| 2. Joint Secretary, Department of AHF | Member |
| 3. Deputy Secretary, Department of Law | Member |
| 4. Deputy Secretary,Department of DPAR | Member |
| 5. Registrar,KVAFSU, | Member Convenor |

ಕ್ರಮ:ಕುಸ

**ವಿಷಯ ಸೂಚಿ: 17:** Approval of the Selection List of Backlog Recruitment Post of Scientist- 1 (SC) at IAH&VB Bengaluru

**ನಿರ್ಣಯ**

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ-ಬೆಂಗಳೂರು ಇಲ್ಲಿ ಖಾಲಿ ಇರುವ ಸಮಾಜ ಕಲ್ಯಾಣ ಇಲಾಖೆಯು ಗುರುತಿಸಿದ ಒಂದು ಬ್ಯಾಕಲಾಗ್ ವಿಜ್ಞಾನಿ-1 (ಪಜಾ) (Pay Scale Rs. 52650-1250-53900-1450-62600-1650-72500-1900-83900-2200-97100) ಹುದ್ದೆ ಭರ್ತಿಗಾಗಿ ನೇಮಕಾತಿ ಅಧಿಸೂಚನೆಯು ದಿನಾಂಕ 15-6-2024 ರಂದು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿತ್ತು. ಸ್ವೀಕರಿಸಲಾದ ಅರ್ಜಿಗಳ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 28-8-2024 ರಂದು ಮೂಲ ದಾಖಲಾತಿಗಳನ್ನು ಪರಿಶೀಲಿಸಿ MERIT ಆಧಾರದ ಮೇಲೆ ಪಟ್ಟಿ ಮಾಡಿ ಸಮಿತಿಯು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತದೆ. ದಿನಾಂಕ 29-8-2024 ರಂದು ಅರ್ಹರಿರುವ ಒಟ್ಟು 11 ಅಭ್ಯರ್ಥಿಗಳಿಗೆ ದಿನಾಂಕ 29-8-2024 ರಂದು Councelling (ಸಮಾಲೋಚನೆ) ಮಾಡಲಾಗಿ ಸಮಿತಿಯು Merit ಆಧಾರದ ಮೇಲೆ ಈ ಕೆಳಕಂಡ ಅಭ್ಯರ್ಥಿಯನ್ನು ವಿಜ್ಞಾನಿ-1 ಹುದ್ದೆಗೆ ನೇಮಕಾತಿ ಮಾಡಲು ಶಿಫಾರಸ್ಸು ಮಾಡಿರುವುದನ್ನು ವ್ಯವಸ್ಥಾಪಕ ಮಂಡಳಿಯ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಮುಂದುವರೆದು ಡಾ.ವೆಂಕಟಚಲ, ವಿ.ಎಸ್. ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರು ಸದರಿ ಬ್ಯಾಕಲಾಗ್ ಹುದ್ದೆ ಭರ್ತಿಗೆ ಯಾವ ಮಾನ ದಂಡಗಳನ್ನು ಅನುಸರಿಸಲಾಗಿದೆ ಎಂಬ ವಿಷಯ ಪ್ರಸ್ತಾಪಿಸಿದಾಗ ಮಾನ್ಯ ಕುಲಪತಿಗಳು ಈ ಹುದ್ದೆಯು 2001 ರ ಹಿಂದಿನ ಹುದ್ದೆಯಾಗಿರುವದರಿಂದ ಆ ಹಿಂದನ ಮಾನದಂಡಗಳನ್ನು ಅನುಸರಿಸಲಾಗಿದೆ ಮತ್ತು ಸದರಿ ಹುದ್ದೆಗೆ NET ಕಡ್ಡಾಯವಾಗಿರುವುದಿಲ್ಲವೆಂದು ಸಭೆ ಗಮನಕ್ಕೆ ತಂದರು. ನಂತರ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಡಾ.ಅರುಣ ಸುಭಾಷ.ಪಿ. (Animal Nutrition) ರವನ್ನು ವಿಜ್ಞಾನಿ-1 ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಿರುತ್ತದೆ ಹಾಗೂ ಸದರಿ ಅಭ್ಯರ್ಥಿಯನ್ನು ಮುಂದೆ ಯಾವುದೇ ಕಾರಣಕ್ಕೆ ಸಹಾಯಕ ಪ್ರಾಧ್ಯಾಪಕರೆಂದು ಪರಿಗಣಿಸುವುಂತಿಲ್ಲವೆಂದು ಮಾಹಿತಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 18: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಜೈವಿಕ ಉತ್ಪಾದನಾ ವಿಭಾಗದ ಬ್ಯಾಕ್ಟೀರಿಯಾ ಲಸಿಕೆ ಉತ್ಪಾದನಾ ಲ್ಯಾಬ್‌ನ (ಜಿಎಂ.ಪಿ.ಲ್ಯಾಬ್-1) filling and stroppering machine ದುರಸ್ತಿ**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಜೈವಿಕ ಉತ್ಪಾದನಾ ವಿಭಾಗದ ಬ್ಯಾಕ್ಟೀರಿಯಾ ಲಸಿಕೆ ಉತ್ಪಾದನಾ ಲ್ಯಾಬನ್ (ಜಿಎಂಪಿ ಲ್ಯಾಬ್ -1) Filling and stroppering machine ದುರಸ್ತಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ present ಮಾಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 19: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಜೈವಿಕ ಉತ್ಪಾದನಾ ವಿಭಾಗದ ಬ್ಯಾಕ್ಟೀರಿಯಾ ಲಸಿಕೆ ಉತ್ಪಾದನಾ ಲ್ಯಾನ್ (ಜಿಎಂಪಿ ಲ್ಯಾಬ್-1) Cap Sealing machine ದುರಸ್ತಿ**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಜೈವಿಕ ಉತ್ಪಾದನಾ ವಿಭಾಗದ ಬ್ಯಾಕ್ಟೀರಿಯಾ ಲಸಿಕೆ ಉತ್ಪಾದನಾ ಲ್ಯಾನ್ (ಜಿಎಂಪಿ ಲ್ಯಾಬ್-1) Cap Sealing machine ದುರಸ್ತಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ present ಮಾಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 20: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಜೈವಿಕ ಉತ್ಪಾದನಾ ವಿಭಾಗದ ಬ್ಯಾಕ್ಟೀರಿಯಾ ಲಸಿಕೆ ಉತ್ಪಾದನಾ ಲ್ಯಾನ್‌ನ (ಜಿಎಂಪಿ ಲ್ಯಾಬ್-1) 150 L seed Fermentor ದುರಸ್ತಿ**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಜೈವಿಕ ಉತ್ಪಾದನಾ ವಿಭಾಗದ ಬ್ಯಾಕ್ಟೀರಿಯಾ ಲಸಿಕೆ ಉತ್ಪಾದನಾ ಲ್ಯಾನ್‌ನ (ಜಿಎಂಪಿ ಲ್ಯಾಬ್-1) L seed Fermentor ದುರಸ್ತಿಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ present ಮಾಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 21: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಲಸಿಕೆ ರವಾನೆ ವಿಭಾಗಕ್ಕೆ ರೆಫ್ರೀಜರೇಟೆಡ್ ವಾಹನವನ್ನು (Refrigerated vehicle) ಖರೀದಿಸುವ ಕುರಿತು**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಲಸಿಕೆ ರವಾನೆ ವಿಭಾಗಕ್ಕೆ ರೆಫ್ರೀಜರೇಟೆಡ್ ವಾಹನವನ್ನು (Refrigerated vehicle) ಖರೀದಿಸುವ ಕುರಿತು ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ present ಮಾಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 22: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಲಸಿಕೆ ತಯಾರಿಕಾ ವಿಭಾಗದಲ್ಲಿರುವ ಯಂತ್ರೋಪಕರಣಗಳನ್ನು 2024-25ನೇ ಸಾಲಿಗೆ ವಾರ್ಷಿಕ ನಿರ್ವಹಣೆ ಒಪ್ಪಂದಕ್ಕೆ (Annual maintenance contract ) ಒಳಪಡಿಸುವ ಕುರಿತು**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಲಸಿಕೆ ತಯಾರಿಕಾ ವಿಭಾಗದಲ್ಲಿರುವ ಯಂತ್ರೋಪಕರಣಗಳನ್ನು 2024-25ನೇ ಸಾಲಿಗೆ ವಾರ್ಷಿಕ ನಿರ್ವಹಣೆ ಒಪ್ಪಂದಕ್ಕೆ (Annual maintenance contract) ಒಳಪಡಿಸುವ ಕುರಿತಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಮುಂಬರುವ ವ್ಯವಸ್ಥಾಪಕ ಮಂಡಳಿ ಸಭೆಯಲ್ಲಿ present ಮಾಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ಕ್ರಮ:ಕುಸ

**ವಿಷಯ ಸೂಚಿ: 23: 100 ml PP Bottle ಖರೀದಿಸುವ ಬಗ್ಗೆ**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಪ್ರತಿ ವರ್ಷ ಸುಮಾರು 3.05 ಕೋಟಿ ಡೋಸ್ ಗಳಷ್ಟು ಕರಡು ಬೇನೆ ಲಸಿಕೆಯನ್ನು ಸರಬರಾಜು ಮಾಡಲು 100 ml PP Bottles ಗಳನ್ನು ಟೆಂಡರ್ ಮೂಲಕ ಕೆಳಗೆ ನಮೂದಿಸಿರುವಂತೆ ಖರೀದಿಸಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

| Sl.No. | Particulars | Amount |
|---|---|---|
| 01 | 100 ml PP bottles 3.5 lakhs numbers<br>(20 mm Rubber stopper sets)<br>(20 mm Alumnium seal lables) | Rs. 52.50 lakh |

ಕ್ರಮ:ಕುಸ

**ವಿಷಯ ಸೂಚಿ: 24: Thioglycollate broth with liver extracts ಖರೀದಿಸುವ ಕುರಿತು**

**ನಿರ್ಣಯ**

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಪ್ರತಿ ವರ್ಷ ಸುಮಾರು 3.05 ಕೋಟಿ ಡೋಸ್ ಗಳಷ್ಟು ಕರಳು ಬೇನೆ ಲಸಿಕೆಯನ್ನು ಮತ್ತು 5.00 ಲಕ್ಷ ಡೋಸ್‌ಗಳಷ್ಟು ಚಪ್ಪೆರೋಗ ಲಸಿಕೆಯನ್ನು ಸರಬರಾಜು ಮಾಡಲು ಮತ್ತು ಲಸಿಕೆಗಳನ್ನು ತಯಾರಿಸಲು Thioglycollate broth with liver extract ಅನ್ನು ಟೆಂಡರ್ ಮೂಲಕ ಕೆಳಗೆ ನಮೂದಿಸಿರುವಂತೆ ಖರೀದಿಸಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

| Sl.No. | Particulars | Amount |
|---|---|---|
| 01 | Thioglycollate broth with liver extract 680 kgs | 23.80 lakh |

ಕ್ರಮ:ಕುಸ:

## 114ನೇ ವ್ಯವಸ್ಥಾಪಕ ಮಂಡಳಿ ಸಭೆಯ ಇತರೆ ವಿಷಯಸೂಚಿಗಳು

ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಈ ಕೆಳಗಿನಂತೆ ತೀರ್ಮಾನಿಸಲಾಯಿತು.

1. ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರಾದ ಡಾ.ವಸಂತ ಬಿರಾದಾರ್ ರವರು ವಿಶ್ವವಿದ್ಯಾಲಯದ ಅಧಿನಿಯಮ 2004 ರಲ್ಲಿ ಪ್ರಸ್ತಾಪಿಸಿರುವಂತೆ ಪ್ರತಿ 45 ದಿವಸಗಳಿಗೊಮ್ಮೆ ವ್ಯವಸ್ಥಾಪಕ ಮಂಡಳಿ ಸಭೆ ಆಯೋಜಿಸುವುದು ಮತ್ತು ವರ್ಷಕ್ಕೆ ಕನಿಷ್ಟ 08 ವ್ಯವಸ್ಥಾಪಕ ಮಂಡಳಿ ಸಭೆಯ ಆಯೋಜಿಸಲು ಅವಕಾಶವಿರುತ್ತದೆ , ಆದರೆ ಎರಡು ತಿಂಗಳು ಕಳೆದರೂ ವ್ಯವಸ್ಥಾಪಕ ಮಂಡಳಿ ಸಭೆ ಆಯೋಜಿಸದೇ ಇರುವ ವಿಷಯವನ್ನು ಸಭೆಯ ಪ್ರಸ್ತಾಪಿಸಿದರು. ಈ ಕುರಿತು ಮಾನ್ಯ ಕುಲಪತಿಗಳು ಕೆಲವೊಂದು ತಾಂತ್ರಿಕ ಕಾರಣಗಳಿಂದ ನಿಗದಿತ ಸಮಯಕ್ಕೆ ಸಭೆ ಆಯೋಜಿಸಲು ಸಾದ್ಯವಾಗಿಲ್ಲ ಇನ್ನೂ ಮುಂದೆ 45 ದಿವಸಗಳ ಒಳಗಾಗಿ ವ್ಯವಸ್ಥಾಪಕ ಮಂಡಳಿ ಸಭೆ ಆಯೋಜಿಸಲು ಕ್ರಮ ಜರುಗಿಸಲಾಗುವುದು ಜೊತೆಗೆ ವ್ಯವಸ್ಥಾಪಕ ಮಂಡಳಿಯ ಉಪಸಮಿತಿಗಳಾದ ಹಣಕಾಸು ಸಮಿತಿ ಮತ್ತು ಯೋಜನಾ ಮತ್ತು ಕಾಮಗಾರಿ ಸಮಿತಿ ಸಭೆಗಳನ್ನು ಆಯೋಜಿಸಲು ಕ್ರಮ ಜರುಗಿಸಲಾಗುವುದೆಂದು ಮತ್ತು ಪ್ರತಿ 06 ತಿಂಗಳಿಗೊಮ್ಮೆ ವ್ಯವಸ್ಥಾಪಕ ಮಂಡಳಿ ಉಪಸಮಿತಿ ಸಭೆಗಳನ್ನು ಆಯೋಜಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿಸಿದರು ಹಾಗೂ ವ್ಯವಸ್ಥಾಪಕ ಮಂಡಳಿ ಸಭೆಗಳ ಆಯೋಜನೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ವಿಸ್ತರಣ ನಿರ್ದೇಶಕರನ್ನು Liason Officer ಆಗಿ ನೇಮಿಸಲು ತೀರ್ಮಾನಿಸಲಾಯಿತು.

**2.** ವಿಶ್ವವಿದ್ಯಾಲಯದಡಿ ಕಾರ್ಯನಿರ್ವಹಿಸುತ್ತಿರುವ ವಿವಿದ ಅಂಗಸಂಸ್ಥೆಗಳಲ್ಲಿನ ಚಟುವಟಿಕೆಗಳ ಕುರಿತು ಮಾಹಿತಿ ಪಡೆಯಲು ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರೊಂದಿಗೆ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು ಮತ್ತು ಪಶುಸಂಗೋಪನಾ ಪಾಲಿಟೆಕ್ನಿಕ್ ಪ್ರಾಚಾರ್ಯರರ ಸಭೆ ಆಯೋಜಿಸಲು ತೀರ್ಮಾನಿಸಲಾಯಿತು.

**3.** ಪ್ರಸ್ತುತ ವಿಶ್ವವಿದ್ಯಾಲಯ ಮತ್ತು ಅಂಗಸಂಸ್ಥೆಗಳಲ್ಲಿರುವ ವಾಹನಗಳು ತುಂಬಾ ಹಳೆಯದಾಗಿದ್ದು ಹೊಸದಾಗಿ ವಾಹನ ಖರೀದಿಸಲು ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಹಾಗೂ ಇದುವರೆಗೂ ಅನುಮತಿ ಬರದೇ ಇರುವ ವಿಷಯ ಸಭೆಯಲ್ಲಿ ಪ್ರಸ್ತಾಪಿಸಲಾಯಿತ್ತು. ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಸರ್ಕಾರಕ್ಕೆ ಪುನ: ಸದರಿ ವಾಹನಗಳ ಖರೀದಿಗಾಗಿ ಅನುಮತಿ ಕೋರುವಂತೆ ಸೂಚಿಸಲಾಯಿತು. ಅನುಮತಿ ನೀಡುವಲ್ಲಿ ವಿಳಂಬವಾದಲ್ಲಿ ವಿಶ್ವವಿದ್ಯಾಲಯದ ಕೆಲಸದ ಹಿತದೃಷ್ಟಿಯಿಂದ ಅಂತರಿಕ ಸಂಪನ್ಮೂಲದಿಂದ ಒಟ್ಟು 09 ವಾಹನಗಳನ್ನು ನಿಯಮಾವಳಿ ಪ್ರಕಾರ ಖರೀದಿಸಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ. ಮುಂದುವರೆದು, ಹೆಬ್ಬಾಳ-ಬೆಂಗಳೂರು ಮತ್ತು ಬೀದರ ಆವರಣದಲ್ಲಿ ವ್ಯವಸ್ಥಾಪಕ ಮಂಡಳಿ ಸದಸ್ಯರು ಭೇಟಿ ನೀಡಿದಾಗ ಮತ್ತು ವಿಶ್ವವಿದ್ಯಾಲಯದ ಕಚೇರಿ ಕೆಲಸಗಳಿಗಾಗಿ ಉಪಯೋಗಿಸಲು 02 ವಾಹನಗಳನ್ನು ಹೊಸ ವಾಹನಗಳು ಖರೀದಿ ಆಗುವವರೆಗೆ ನಿಯಮಾವಳಿ ಪ್ರಕಾರ ಮಾಸಿಕ ಬಾಡಿಗೆ ಆಧಾರದ ಪಡೆಯಲು ವ್ಯವಸ್ಥಾಪಕ ಮಂಡಳಿ ತೀರ್ಮಾನಿಸಲಾಯಿತು.

4. ವಿಶ್ವವಿದ್ಯಾಲಯದಡಿ ಮಂಜೂರಾಗಿರುವ ಬೋಧಕೇತರ ಹುದ್ದೆಗಳನ್ನು ಭರ್ತಿಗೆ ವಿಳಂಬವಾಗಿರುವ ವಿಷಯ ಪ್ರಸ್ತಾಪಿಸಲಾಗಿ ಈ ಕುರಿತು ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿ ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದ್ದು ಅನುಮತಿ ಬರುವ ನೀರಿಕ್ಷೆಯಲ್ಲಿದ್ದೇವೆ ಎಂದು ಸಭೆಯ ಗಮನಕ್ಕೆ ತಂದರು. ಈ ಕುರಿತು ಮಾನ್ಯ ವ್ಯವಸ್ಥಾಪಕ ಮಂಡಳಿಯು ಸುದೀರ್ಘ ಚರ್ಚೆಯ ನಂತರ ಕುಲಪತಿಗಳು, ಕುಲಸಚಿವರು ಹಾಗೂ ಎಲ್ಲಾ ವ್ಯವಸ್ಥಾಪಕ ಮಂಡಳಿ ಸದಸ್ಯರು ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು ಇವರನ್ನು ಖುದ್ದಾಗಿ ಭೇಟಿ ಮಾಡಿ ತಿದ್ದುಪಡಿ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರದ ಅನುಮತಿ ಕೋರಲು ನಿರ್ಣಯಿಸಲಾಯಿತು.

5. SCP/TSP ಅನುದಾನದಡಿ ಲ್ಯಾಪ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಆಯಾ ಮಹಾವಿದ್ಯಾಲಯಗಳ ಮುಖ್ಯಸ್ಥರುಗಳ ಕ್ರಮವಹಿಸಲು ವ್ಯವಸ್ಥಾಪಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

(ಕ್ರಮ:ಕುಸ:)

6. The Members of Board of Management informed to prepare a action plan for the essential works to be under taken in various campuses of KVAFSU, Bidar. As per

the action plan to execute the works, available fund in the University can be utilized with a approval from Government.

(A:R)

Meeting ended with vote of thanks by Registrar & Member Secretary

| | |
|---|---|
| Sd/- | Sd/- |
| (P.T.Ramesh) | (K.C.Veeranna) |
| Registrar & Member Secretary | Hon’ble Vice Chancellor & Chairman |